ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಆದೇಶದ ಸಂಖ್ಯೆ: ಹೆಚ್‌ಡಿ:33: ಪಿಒಪಿ:2005 ದಿನಾಂಕ: 8/7/2005ರ ಆದೇಶದಲ್ಲಿ ಸರ್ಕಾರದ ಮಂಜೂರಾತಿ ನೀಡಿದೆ.

ಆ) ನಗದು ಬಹುಮಾನ ಪಾವತಿಸಲು ಡಿಜಿ ಮತ್ತು ಐಜಿಪಿರವರಿಗೆ ತಿಳಿಸಲಾಗಿದೆ. ನಿವೇಶನ ನೀಡುವ ಬಗ್ಗೆ ಯೋಜನೆ ರೂಪಿಸಲು ಡಿ.ಜಿ. ಮತ್ತು ಐ.ಜಿ.ಪಿರವರಿಗೆ ತಿಳಿಸಲಾಗಿದೆ.

ಇ) ಆದಷ್ಟು ಬೇಗ ಪಾವತಿಸಲು ಕ್ರಮ ವಹಿಸಲಾಗುವುದು.

5381(6189) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಐದು ವರ್ಷಗಳಲ್ಲಿ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದವರು ನಿರ್ಮಿಸಿದ ಬಡಾವಣೆಗಳ ಸಂಖ್ಯೆ ಹಾಗೂ ವಿತರಿಸಿದ ನಿವೇಶನಗಳ ಸಂಖ್ಯೆ ಎಷ್ಟು;

ಆ) ಸದರಿ ಬಡಾವಣೆಗಳಲ್ಲಿ ನಿವೇಶನದಾರರು ಮನೆಗಳನ್ನು ಕಟ್ಟಿಕೊಂಡು ವಾಸ ವಿರಲು ಬೇಕಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆಯೇ;

ಇ) ಬಡವರು, ಮಧ್ಯಮ ವರ್ಗದವರು ಬ್ಯಾಂಕ್ ಸಾಲವನ್ನು ಪಡೆದುಕೊಂಡು ನಿವೇಶನ ಹೊಂದಿ, ಸೌಲಭ್ಯಗಳಿಲ್ಲದೆ ಮನೆ ಕಟ್ಟಿಕೊಳ್ಳಲು ಅನಾನುಕೂಲಕೊಳಗಾಗಿರುವುದು ನಿಜವಲ್ಲವೆ;

ಈ) ಹೌದಾದಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಸರಕಾರದ ಕ್ರಮಗಳೇನು;

ಉ) ಬಡಾವಣೆಗಳನ್ನು ನಿರ್ಮಿಸುವ ಹಂತದಲ್ಲಿಯೇ ಮೂಲಭೂತ ಸೌಲಭ್ಯಗಳನ್ನು ವ್ಯವಸ್ಥೆಗೊಳಿಸುವ ಕ್ರಮವನ್ನು ಸರಕಾರ ಅನುಸರಿಸದಿರಲು ಕಾರಣಗಳೇನು;

ಊ) ಈಗಾಗಲೇ ವಿತರಿಸಲಾಗಿರುವ ಬಡಾವಣೆಗಳಿಗೆ ಕೊಡಲೇ ಸೌಕರ್ಯಗಳನ್ನು ಒದಗಿಸಿಕೊಡಲು ಸರಕಾರ ಕ್ರಮಕ್ಕೆಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಕಳೆದ ಐದು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆರು ಬಡಾವಣೆಗಳನ್ನು ನಿರ್ಮಿಸಿ 40,000 ನಿವೇಶನಗಳನ್ನು ಹಂಚಿಕೆ ಮಾಡಿದೆ.

ಆ) ಅಂಜನಾಪುರ, ಅಂಜನಾಪುರ ಮುಂದುವರಿದ ಬಡಾವಣೆ ಹಾಗೂ ಬನಶಂಕರಿ 6ನೇ ಹಂತ ಬಡಾವಣೆಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗಿದೆ. ಅಂಜನಾಪುರ ಬಡಾವಣೆಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಬಡಾವನೆಗಳಿಗೆ ರಸ್ತೆ ಕಾಮಗಾರಿಗಾಗಿ 265 ಲಕ್ಷಗಳಲ್ಲಿ ರಸ್ತೆ ಅಭಿವೃದ್ಧಿ ಕೆಲಸಕ್ಕೆ ಟೆಂಡರ್ ಅನ್ನು ಕರೆಯಲಾಗಿದೆ. ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಸರ್.ಎಂ. ವಿಶ್ವೇಶ್ವರಯ್ಯ ಮುಂದುವರಿದ ಬಡಾವಣೆ, ಬನಶಂಕರಿ ಮುಂದುವರಿದ ಬಡಾವಣೆಗಳಿಗೆ ವಿದ್ಯುತ್ ಸರಬರಾಜಿನ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ.

ಇ) ಸ್ವಲ್ಪಮಟ್ಟಿಗೆ ನಿಜ.

ಈ) ಪ್ರಶ್ನೆ (ಅ) ಭಾಗದಲ್ಲಿ ಉತ್ತರಿಸಿರುವಂತೆ ಕ್ರಮ ಕೈಗೊಳ್ಳಲಾಗಿದೆ.

ಉ) ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಅಭವೃದ್ಧಿಪಡಿಸಿದ ಬಡಾವಣೆಗಳಿಗೆ ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಇನ್ನು ಮುಂದೆ ಬಡಾವಣೆಗಳ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕೆಲಸಗಳನ್ನು ಜೊತೆ ಜೊತೆಯಲ್ಲಿಯೇ ತೆಗೆದುಕೊಳ್ಳಲಾಗುವುದು.

ಈ) ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

5383(6276) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಗಂಗಾರಾಂ ಕಟ್ಟಡದ ಹಾನಿಯಿಂದ ನೊಂದವರಿಗೆ ಪರಿಹಾರ ನೀಡಲಾಗಿದೆಯೇ?

ಆ) ಪ್ರತಿಯೊಬ್ಬರಿಗೆ ಎಷ್ಟು ಹಣ ನೀಡಲಾಗಿದೆ?

ಇ) ಈ ಹಣ ಕೋರ್ಟ್ ಆದೇಶದಂತೆ ಸರ್ಕಾರದಿಂದ ನೀಡಲಾಗಿದೆಯೇ ಅಥವಾ ಕಟ್ಟಡದ ಮಾಲೀಕರಿಂದ ನೀಡಲಾಗಿದೆಯೇ?

ಈ) ಇನ್ನು ಎಷ್ಟು ಜನಕ್ಕೆ ಪರಿಹಾರ ಬಾಕಿ ಇದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಮರಣ ಹೊಂದಿದ ವ್ಯಕ್ತಿಗಳ ವಾರಸುದಾರರಿಗೆ ರೂ. 2000/– ರಂತೆ ಮತ್ತು ಗಾಯಗೊಂಡವರಿಗೆ ರೂ. 500/– ರಂತೆ ಹಾಗೂ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಮೃತ ಹೊಂದಿದ ವಾರಸುದಾರರಿಗೆ ರೂ. 5000/– ಹಾಗೂ ಪ್ರಧಾನ ಮಂತ್ರಿಯವರ ನಿಧಿಯಿಂದ ರೂ. 2000/–ಗಳ ಪರಿಹಾರವನ್ನು ನೀಡಲಾಗಿದೆ.

ಇ) ಸಿವಿಲ್ ಅಪೀಲು ಸಂ.6720/98 ಮತ್ತು 6721/98 ರಡಿ ಶ್ರೀ ಪಿ.ಎ. ಕುಲಕರ್ಣಿ ಮತ್ತು ಇತರರ ಕೋರಿಕೆಯನ್ನು ಹಾಗೂ ಸುಪ್ರೀಂ ಕೋರ್ಟ್ ಆದೇಶವನ್ನು ಸರ್ಕಾರವು ಪರಿಶೀಲಿಸಿ, ರೂ. 16,17,000/– ಮೊತ್ತವನ್ನು ಗಂಗಾರಾಂ ಕಟ್ಟಡದಲ್ಲಿ ಮೃತರಾದವರಿಗೆ ಎಕ್ಸ್‌ಗ್ರೇಷಿಯಾವನ್ನು ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನೀಡಲು ನಿರ್ದೇಶಿಸಲಾಗಿತ್ತು. ಅದರಂತೆ, ದಿನಾಂಕ 7.8.04 ರಂದು ಉಪ ಆಯುಕ್ತರು (ಕಂದಾಯ ಮತ್ತು ಮುಖ್ಯ ಲೆಕ್ಕಾಧಿಕಾರಿಗಳ ಹೆಸರಿನಲ್ಲಿ ಜಂಟಿ ಖಾತೆಯನ್ನು ತೆರೆದು ರೂ. 16,17,000/– ಗಳನ್ನು ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಇಲ್ಲಿ ದಿನಾಂಕ 10.9.2004 ರಂದು ಠೇವಣಿ ಇಡಲಾಗಿದೆ.

ಈ) ಸಂತ್ರಸ್ತರ ವಾರಸುದಾರರು ಮತ್ತು ಮೃತರ ವಾರಸುದಾರರ ಪ್ರಸ್ತುತ ವಿಳಾಸಗಳು ಲಭ್ಯವಿಲ್ಲದ ಕಾರಣ, ಪತ್ರಿಕಾ ಪ್ರಕಟಣೆ ಹೊರಡಿಸಿ, ವಿವರಗಳನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿದೆ. ಫಲಾನುಭವಿಗಳ ವಿವರಗಳನ್ನು ಸಂಗ್ರಹಿಸಿದ ನಂತರ ಕರ್ನಾಟಕ ರಿಜಿಸ್ಟ್ರಾರ್ ಜನರಲ್ ರವರ ಮೂಲಕ ಪರಿಹಾರವನ್ನು ವಿತರಿಸಲಾಗುವುದು.

5385(6279) ಶ್ರೀ ಕೃಷ್ಣಪ್ಪ ಎಂ.ಟಿ (ತುರುವೇಕೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿ.ಡಿ.ಎ. ಮೇಲು ಸೇತುವೆ ಕೆಲಸ ಪೂರ್ಣಗೊಳಿಸಲು ಎಷ್ಟು ಹಣವನ್ನು ಲಾಭಾಂಶವಾಗಿ ಗುತ್ತಿಗೆದಾರರಿಗೆ ನೀಡಲು ಉದ್ದೇಶಿಸಲಾಗಿದೆ;

ಆ) ಈ ಸರ್ಕಾರಿ ಸ್ವಾಮ್ಯದ ಗುತ್ತಿಗೆದಾರರಿಗೆ ನೀಡಿದ ಸೌಲಭ್ಯ ರಾಜ್ಯದ ಇತರ ಗುತ್ತಿಗೆದಾರರಿಗೂ ಹಾಗೂ ಇತರ ಇಲಾಖೆಗಳಿಗೂ ಅನ್ವಯವಾಗುವುದೇ;

ಇ) ಇದನ್ನು ರಾಜ್ಯ ಉಚ್ಚ ನ್ಯಾಯಾಲಯ ಒಪ್ಪಿಬೆಯೇ?